ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 19/10/20

## ಬಿಜೆಪಿಗೆ ಬಂಡಾಯ ಬಿಸಿ, ಕಾಂಗ್ರೆಸ್‌ಗೆ ಸವಾಲು, ಜೆಡಿಎಸ್‌ಗೆ ಒಳಜಾತಿ ಫಜೀತಿ

# ಮೂವರಿಗೂ ಅಗ್ನಿಕುಂಡ ಆಗ್ನೇಯ

ವಿ.ವಾ. 19-10-20

■ ವಿಲಾಸ ಮೇಲಗಿರಿ ಬೆಂಗಳೂರು

ಆಗ್ನೇಯ ಪದವೀಧರ ಕ್ಷೇತ್ರ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳಿಗೆ ಅಗ್ನಿಪರೀಕ್ಷೆಯಾಗಿದೆ. ಬಿಜೆಪಿ ಅಭ್ಯರ್ಥಿಗಳೇ ಹೆಚ್ಚು ಬಾರಿ ಗೆದ್ದಿರುವ ಇಲ್ಲಿ ಆಗೊಮ್ಮೆ-ಈಗೊಮ್ಮೆ ಇತರ ಪಕ್ಷಗಳೂ ದರ್ಬಾರ್ ನಡೆಸಿವೆ. ಮೇಲ್ನೋಟಕ್ಕೆ ವೀರಶೈವ-ಲಿಂಗಾಯತ ಮತದಾರರು ಹೆಚ್ಚಿರುವಂತೆ ಕಂಡರೂ ವಾಸ್ತವದಲ್ಲಿ ಕುರುಬ, ಯಾದವ, ತಿಗಳ, ಬಲಿಜ ಸೇರಿ ಒಬಿಸಿ ಮತದಾರರ ಸಂಖ್ಯೆಯೂ ಅಷ್ಟೇ ಪ್ರಮಾಣದಲ್ಲಿದೆ.

ಒಕ್ಕಲಿಗ ಸಮುದಾಯದ ಎಂ.ಚಿದಾನಂದ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಜೆಡಿಎಸ್ ವಕ್ತಾರರಾಗಿದ್ದ ಬಲಿಜ ಸಮುದಾಯದ ರಮೇಶ್‌ಬಾಬು, ಪಕ್ಷ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡು ಕೈ ಹುರಿಯಾಳಾಗಿದ್ದಾರೆ. ಈ ಕ್ಷೇತ್ರ ಪ್ರತಿನಿಧಿಸಿದ್ದ ಒಕ್ಕಲಿಗ ಸಮುದಾಯದ ಆರ್. ಚೌಡರೆಡ್ಡಿ ಅವರನ್ನೇ ಜೆಡಿಎಸ್ ಮತ್ತೆ ರಣಾಂಗಣಕ್ಕಿಳಿಸಿ ಪುನರಾಯ್ಕೆ ಬಯಸಿದೆ. ದಳಪತಿಗಳಿಗೆ ಕ್ಷೇತ್ರ ಉಳಿಸಿಕೊಳ್ಳಬೇಕೆಂಬ ಇರಾದೆ ಇದೆ. ಅಧಿಕಾರದಲ್ಲಿರುವ ಬಿಜೆಪಿ ಚುನಾವಣೆ ಗೆಲ್ಲುವ ಉಮೇದಿನಲ್ಲಿದೆ. ಇನ್ನು ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾದ ತರುವಾಯ ಎದುರಾಗಿರುವ ಚುನಾವಣೆ ಇದಾಗಿರುವುದರಿಂದ ಶತಾಯಗತಾಯ ಗೆದ್ದು, ಸಾಮರ್ಥ್ಯ ಸಾಬೀತುಪಡಿಸಬೇಕೆಂಬ ಉತ್ಸುಕತೆ ಇದೆ. ಹಾಗಾಗಿ ಈ ಕ್ಷೇತ್ರ ಮೂರೂ ಪಕ್ಷಗಳಿಗೆ ಸವಾಲಾಗಿದೆ.

**ಆರದ ಬಂಡಾಯದ ಬೆಂಕಿ:** ಚುನಾವಣೆ ಘೋಷಣೆಗೂ ಮೊದಲೇ ಬಿಜೆಪಿಯಲ್ಲಿ ಟಿಕೆಟ್‌ಗೆ ಭಾರಿ ಪೈಪೋಟಿ ಇತ್ತು. ಟಿಕೆಟ್ ಸಿಗುವ ಭರವಸೆಯಲ್ಲಿದ್ದ ಎಚ್.ಎಸ್. ಲೇಪಾಕ್ಷ ಪಕ್ಷೇತರರಾಗಿ ಕಣದಲ್ಲಿ ಉಳಿಯುವ ಮೂಲಕ ಬಿಜೆಪಿ ಅಭ್ಯರ್ಥಿಗೆ ಬಿಸಿತುಪ್ಪವಾಗಿದ್ದಾರೆ. ಹಿರಿಯೂರು ಶಾಸಕಿ ಪೂರ್ಣಿಮಾ ಪತಿ ಡಿ.ಟಿ. ಶ್ರೀನಿವಾಸ್ ಕೂಡ ಬಿಜೆಪಿ ಟಿಕೆಟ್ ಪಡೆಯಲು ಪ್ರಬಲ ಆಕಾಂಕ್ಷಿಯಾಗಿದ್ದರು. ಟಿಕೆಟ್ ಕೈತಪ್ಪಿದ್ದರಿಂದ ಪಕ್ಷೇತರರಾಗಿ ಅಖಾಡದಲ್ಲಿದ್ದಾರೆ. ಈ ಇಬ್ಬರನ್ನೂ ಉಮೇದುವಾರಿಕೆಯಿಂದ ಹಿಂದೆ ಸರಿಸುವ ಗಟ್ಟಿ ಪ್ರಯತ್ನ ಬಿಜೆಪಿಯಿಂದ ಆಗಲೇ ಇಲ್ಲ. ಹೀಗಾಗಿ ಪಕ್ಷದ ಅಭ್ಯರ್ಥಿ ಎಂ.ಚಿದಾನಂದಗೆ ಬಂಡಾಯದ ಬಿಸಿ ಸುಡುತ್ತಿದೆ.

**ಪ್ರಚಾರ ಜೋರು**

ಒಮ್ಮತದ ಅಭ್ಯರ್ಥಿ ಎಂಬ ಕಾರಣಕ್ಕೆ ಕಾಂಗ್ರೆಸ್‌ನ ಎಲ್ಲ ನಾಯಕರು ರಮೇಶ್ ಬಾಬು ಗೆಲುವಿಗೆ ಕೈಜೋಡಿಸಿದ್ದಾರೆ. ಜೆಡಿಎಸ್‌ನ ಆರ್.ಚೌಡರೆಡ್ಡಿ ಪರವಾಗಿ ಬಸವರಾಜ ಹೊರಟ್ಟಿ ಪ್ರಚಾರ ರಂಗೇರಿಸಿದ್ದಾರೆ. ಬಿಜೆಪಿ ಅಭ್ಯರ್ಥಿ ಎಂ.ಚಿದಾನಂದ ಕೂಡ ಸ್ಥಳೀಯ ನಾಯಕರ ಜತೆ ಪ್ರಚಾರದಲ್ಲಿದ್ದಾರೆ. ರಾಜ್ಯಮಟ್ಟದ ನಾಯಕರು ವಿಧಾನಸಭೆ ಉಪ ಚುನಾವಣೆಯಲ್ಲಿ ಮಗ್ನರಾಗಿರುವುದರಿಂದ ಇನ್ನೂ ಸಾಥ್ ಕೊಟ್ಟಿಲ್ಲ.

### ಅಭ್ಯರ್ಥಿಗಳ ಪರಿಚಯ



ಎಂ.ಚಿದಾನಂದ
ಬಿ.ಎಸ್ಸಿ ಪದವೀಧರ, ಸಮಾಜ ಸೇವಕ. ಪತ್ನಿ ಹೆಸರಿನಲ್ಲಿ ಶಿಕ್ಷಣ ಸಂಸ್ಥೆ ಇದೆ.



ರಮೇಶ್‌ಬಾಬು
ವಕೀಲ, ಕಳೆದ ಬಾರಿ ಆಗ್ನೇಯ ಶಿಕ್ಷಕರ ಕ್ಷೇತ್ರದ ಉಪ ಚುನಾವಣೆಯಲ್ಲಿ ಜಯ.



ಆರ್. ಚೌಡರೆಡ್ಡಿ
ಎಂ.ಎ. ಪದವೀಧರ, ಸಮಾಜ ಸೇವೆ, ವ್ಯವಸಾಯ. ಕಳೆದ ಅವಧಿಯಲ್ಲಿ ಇದೇ ಕ್ಷೇತ್ರದ ಪ್ರತಿನಿಧಿ.




| ಮತದಾರರು | | | |
|---|---|---|---|
| ಪುರುಷ | ಮಹಿಳೆ | ಇತರ | ಒಟ್ಟು |
| 68,414 | 40,711 | 4 | 1,09,129 |

### 15 ಮಂದಿ ಕಣದಲ್ಲಿ

**ಬಿಜೆಪಿ:** ಎಂ.ಚಿದಾನಂದ
**ಕಾಂಗ್ರೆಸ್:** ರಮೇಶ್‌ಬಾಬು
**ಜೆಡಿಎಸ್:** ಆರ್.ಚೌಡರೆಡ್ಡಿ
ಶ್ರೀನಿವಾಸ ಟಿ. (ಕರ್ನಾಟಕ ರಾಷ್ಟ್ರ ಸಮಿತಿ), ಜಿ.ಸಿ.ಪಾಟೀಲ (ಸರ್ವ ಜನತಾ ಪಾರ್ಟಿ), ಡಾ.ಕೆ.ಎಂ.ಸುರೇಶ್, ಎಚ್.ಎಸ್.ಲೇಪಾಕ್ಷ, ಕರಬಸಪ್ಪ ಪಿ.ಮದ್ಯಾನ್ನದ, ಎಚ್.ಹಾಲೇಶಪ್ಪ, ಎಸ್. ಸತೀಶ, ದಾಸ್ ಪಿ.ಆರ್., ಡಿ.ಟಿ.ಶ್ರೀನಿವಾಸ್, ಶಿವರಾಮಯ್ಯ, ಬಿ.ಕುಮಾರಸ್ವಾಮಿ ಹಾಗೂ ಜಿ.ವೆಂಕಟಾಚಲಪತಿ ಪಕ್ಷೇತರರಾಗಿ ಕಣದಲ್ಲಿ ಉಳಿದಿದ್ದಾರೆ.

### ಕ್ಷೇತ್ರದ ಹರವು 600 ಕಿ.ಮೀ.

**5 ಲೋಕಸಭಾ ಕ್ಷೇತ್ರಗಳು,** 33 ವಿಧಾನಸಭಾ ಕ್ಷೇತ್ರಗಳನ್ನು ಆಗ್ನೇಯ ಪದವೀಧರ ಕ್ಷೇತ್ರ ಒಳಗೊಂಡಿದೆ. ಸರಿಸುಮಾರು 600 ಕಿ.ಮೀ. ವ್ಯಾಪ್ತಿ ಹೊಂದಿದೆ. ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಯ ಮುಕ್ಕಾಲು ಭಾಗ ಈ ಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ.

### ಶೇ.60 ಮಾತ್ರ ಮತದಾನ?

**ಚುನಾವಣೆಯಲ್ಲಿ** ಸಾಮಾನ್ಯವಾಗಿ ಶೇ.60 ಮತದಾನವಾಗುತ್ತದೆ. ಈ ಬಾರಿ ಕರೊನಾ ಕಾರಣ ಮತದಾನ ಪ್ರಮಾಣ ಕುಸಿಯುವ ಸಾಧ್ಯತೆಯೂ ಇದೆ. ಹಾಗಾಗಿ ಯಾರೇ ಗೆದ್ದರೂ ಅಲ್ಪ ಮತಗಳ ಅಂತರ ಮಾತ್ರ.

### ಯಾವ ಜಾತಿಗೂ ಹಿಡಿತವಿಲ್ಲ

**ಒಂದೊಂದು** ಜಿಲ್ಲೆಯಲ್ಲಿ ಒಂದೊಂದು ಜಾತಿ ಮತದಾರರ ಪ್ರಾಬಲ್ಯವಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡ, ಚಿಕ್ಕಬಳ್ಳಾಪುರದಲ್ಲಿ ಬಲಿಜ, ತುಮಕೂರಲ್ಲಿ ಒಕ್ಕಲಿಗ, ಲಿಂಗಾಯತ, ಒಬಿಸಿ, ದಾವಣಗೆರೆಯಲ್ಲಿ ಲಿಂಗಾಯತ ಮತದಾರರ ಸಂಖ್ಯೆ ಹೆಚ್ಚಿದೆ. ಹಾಗಾಗಿ ಯಾವ ಜಿಲ್ಲೆಯಲ್ಲೂ ಒಂದೇ ಸಮುದಾಯದ ಹಿಡಿತವಿಲ್ಲ.

### ಗೊಲ್ಲ, ಲಿಂಗಾಯತರ ಪ್ರಾಬಲ್ಯ

**ಕ್ಷೇತ್ರದಲ್ಲಿ** ಗೊಲ್ಲ ಮತ್ತು ಲಿಂಗಾಯತ ಮತಗಳೇ ನಿರ್ಣಾಯಕ ಪಾತ್ರ ವಹಿಸುತ್ತವೆ. ಹಾಗಾಗಿ ಗೊಲ್ಲ ಸಮುದಾಯಕ್ಕೆ ಸೇರಿದ ಡಿ.ಟಿ.ಶ್ರೀನಿವಾಸ್, ಲಿಂಗಾಯತ ಸಮುದಾಯಕ್ಕೆ ಸೇರಿದ ಎಚ್.ಎಸ್.ಲೇಪಾಕ್ಷ ಕಣದಲ್ಲಿರುವುದು ಬಿಜೆಪಿ ವರಿಷ್ಠರಿಗೆ ತಲೆನೋವಾಗಿದೆ.

### ಮತ ಹಂಚಿಕೆ ನಿಗೂಢ

**ಬಿಜೆಪಿ** ಹಾಗೂ ಜೆಡಿಎಸ್ ಒಕ್ಕಲಿಗ ಸಮುದಾಯದವರಿಗೆ ಟಿಕೆಟ್ ನೀಡಿದ್ದರೆ, ಕಾಂಗ್ರೆಸ್ ಬಲಿಜ ಸಮುದಾಯಕ್ಕೆ ಟಿಕೆಟ್ ಕೊಟ್ಟಿದೆ. ಲಿಂಗಾಯತರಿಗೆ ಯಾವ ಪಕ್ಷವೂ ಟಿಕೆಟ್ ನೀಡಿಲ್ಲ. ಲೇಪಾಕ್ಷಗೆ ಟಿಕೆಟ್ ನೀಡಬಹುದೆಂಬ ಸಮುದಾಯದ ನಿರೀಕ್ಷೆ ಹುಸಿಯಾಗಿದೆ. ಹಾಗಾಗಿ ವೀರಶೈವ - ಲಿಂಗಾಯತ ಮತಗಳು ಯಾರಿಗೆ ಬೀಳುತ್ತವೆ ಎಂಬುದು ನಿಗೂಢ.

### ಒಳಪಂಗಡದ ಏಟು?

**ಬಿಜೆಪಿ** ಹಾಗೂ ಜೆಡಿಎಸ್ ಒಕ್ಕಲಿಗ ಸಮುದಾಯಕ್ಕೆ ಸೇರಿದವರಿಗೆ ಟಿಕೆಟ್ ನೀಡಿರುವುದರಿಂದ ಜಾತಿ, ಪಂಗಡ, ಒಳಪಂಗಡದ ಲೆಕ್ಕಾಚಾರ ಕೂಡ ನಡೆದಿದೆ. ಬಿಜೆಪಿ ಮತ್ತು ಜೆಡಿಎಸ್ ಅಭ್ಯರ್ಥಿಗಳು ಒಂದೇ ಸಮುದಾಯಕ್ಕೆ ಸೇರಿರುವುದರಿಂದ ಕುಲದ ಬಗ್ಗೆಯೂ ಮತದಾರರಲ್ಲಿ ಚರ್ಚೆ ನಡೆದಿದೆ ಎನ್ನಲಾಗಿದೆ.